**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 1012/2022**

| | | | |
|---|---|---|---|
| **ಹೆಸರು** | **:** | **ಅನೀತ** | **ಚಾ.ಸಾ.1** |
| **ಗಂಡನ ಹೆಸರು** | **:** | **ಅಶೋಕ** | **ಫ್ರಾ.ಸಾ.1** |
| **ವಯಸ್ಸು** | **:** | **35 ವರ್ಷ** | **ದಿನಾಂಕಃ 22-03-2024** |
| **ಉದ್ಯೋಗ** | **:** | **ಕೂಲಿ ಕೆಲಸ** | |
| **ವಾಸಸ್ಥಳ** | **:** | **ಪರದರಮೊತಕಪಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-4 ಮತ್ತು 6 ನನ್ನ ಸಂಬಂಧಿಕರು. ಚಾಸಾ-5 ನನ್ನ ಗಂಡ. ಚಾಸಾ-7 ನಮ್ಮ ಊರಿನವರು. ಆರೋಪಿತರು ನನ್ನ ಸಂಬಂಧಿಕರು.

ದಿನಾಂಕ 05-02-2022 ರಂದು ಸಂಜೆ 7 ಗಂಟೆಗೆ ನಾನು ಮತ್ತು ನನ್ನ ಗಂಡ ಮನೆಯಲ್ಲಿದ್ದಾಗ ಆರೋಪಿತರಿಬ್ಬರು ಬಂದು ಎ ರಂಡಿ ನಿನಗೆ ಹೊಡೆಯುತ್ತಿನಿ, ಬಡಿತ್ತಿನಿ ನಿನಗೆ ಜೀವ ಸಹಿತ ಬೀಡುವುದಿಲ್ಲ ನಿನ್ನ ಗಂಡನ ಮೇಲೆ ಕೇಸ ಮಾಡುತ್ತೇನೆ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ. ಆಗ 1 ನೇ ಆರೋಪಿ ನನ್ನ ಸೀರೆ ಹೀಡಿದು ಎಳೆದಾಡಿದ್ದಾನೆ. 2 ನೇ ಆರೋಪಿ ಇವರಿಗೆ ಜೀವ ಸಹಿತ ಬೀಡಬಾರದು ಎಂದು ನನಗೆ ಒತ್ತಿ ಹೀಡಿದ್ದಾರೆ.

1 ನೇ ಆರೋಪಿ ಚಾಸಾ-5 ರವರಿಗೆ ಕೈಯಿಂದ ಬೇನ್ನಿಗೆ ಮತ್ತು ಕಪಾಳಕ್ಕೆ ಹೊಡೆದಿದ್ದಾನೆ. ಆರೋಪಿತರಿಬ್ಬರು ನಮಗೆ ಜೀವ ಸಹಿತ ಬೀಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ.

ಅದೇ ದಿನ ಸಂಜೆ 8 ಗಂಟೆಗೆ ಪೋಲಿಸ ಠಾಣೆಗೆ ಹೋದಾಗ ಪೋಲಿಸರು ಇರಲಿಲ್ಲ. ಮರುದಿನ ಹೋದಾಗಲೂ ಸಹ ಪೋಲಿಸರು ಪೋಲಿಸರ ಠಾಣೆಯಲ್ಲಿ ಇರಲಿಲ್ಲ. ಆದ್ದರಿಂದ ನ್ಯಾಯಾಲಯಕ್ಕೆ ಬಂದು ದೂರನ್ನು ಸಲ್ಲಿಸಿದ್ದೇನೆ.

ಹೊಲಗಳ ಕಾರಣಕ್ಕಾಗಿ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆ. ಜಗಳವನ್ನು ಚಾಸಾ-4 ಮತ್ತು 6 ರವರು ನೋಡಿ ಬೀಡಿಸಿರುತ್ತಾರೆ. ಸಾಕ್ಷಿ ತಾವು ಸಲ್ಲಿಸಿದ ಖಾಸಗಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಹಲ್ಲೆ ಕಾರಣಕ್ಕಾಗಿ ನನ್ನ ಬಲಗೈಗೆ ಗಾಯವಾಗಿದೆ. ಜಗಳವಾದ ಮರುದಿನ ಮಧ್ಯಾಹ್ನ 1-2 ಗಂಟೆಗೆ ಸುಲೇಪೇಟ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಗಂಡ ಆಸ್ಪತ್ರೆಗೆ ಹೋಗಿರುವುದಿಲ್ಲ. ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಜೆ.ಪಿ.ಎ ವಕೀಲರಿಂದಃ-**

ನನ್ನ ಗಂಡನಿಗೆ 3 ಜನ ಸಹೋದರರು. ಪಾಲುಗಾರಿಕೆಗಾಗಿ ನನ್ನ ಗಂಡ ಹಾಗೂ ನನ್ನ ಗಂಡನ ಸಹೋದರರ ಮಧ್ಯ ದಾವೆ ನಡೆದಿದೆ ಎಂದರೆ ಸರಿ. ಸದರಿ ದಾವೆಯನ್ನು 4 ಪಾಲು ಮಾಡಿಕೊಡಲು ಸಲ್ಲಿಸಿದ್ದಾರೆ ಎಂದರೆ ಸರಿ.

ಆರೋಪಿತರಿಬ್ಬರು ಹೈದ್ರಾಬಾದನಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಒಂದು ಬಾರಿ ದೂರನ್ನು ನೀಡಿದ್ದೇನೆ. ನಾನು ಪೋಲಿಸ ಠಾಣೆಗೆ ಹೋದಾಗ ದೂರು ನೀಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ದೂರು ನೀಡಿದ್ದೇನೆ ಆದರೆ ಪೋಲಿಸರು ಇರಲಿಲ್ಲ ಎಂದು ನುಡಿಯುತ್ತಾರೆ. ಪೋಲಿಸರು ಪೋಲಿಸ ಠಾಣೆಯಲ್ಲಿ ಯಾವಾಗಲೂ ಇರುತ್ತಾರೆ ಯಾವ ಸಮಯಕ್ಕೆ ದೂರು ನೀಡಿದರು ಸಹ ಪಡೆಯುತ್ತಾರೆ ಎಂದರೆ ಸರಿ. ನೀವು ಸಲ್ಲಿಸಿದ ದೂರು ಪೋಲಿಸರು ಪಡೆದಿದ್ದಾರಾ ಎಂದು ಪ್ರಶ್ನಸಿದಾಗ ಸಾಕ್ಷಿ ಮರುದಿನ ಬನ್ನಿ ಎಂದು ಹೇಳಿ ಕಳುಹಿಸಿದ್ದಾರೆ ಎಂದು ನುಡಿಯುತ್ತಾರೆ. ದೂರು ನೀಡಲು ನಾನು ಮತ್ತು ನನ್ನ ಗಂಡ ಹೋಗಿದ್ದೇವು.

ನಾನು ಪೋಲಿಸರಿಗೆ ನನಗೆ ಮತ್ತು ನನ್ನ ಗಂಡನಿಗೆ ಗಾಯವಾದ ಬಗ್ಗೆ ಹೇಳಿದ್ದೇನೆ. ದೂರು ನೀಡಲು ಹೋದಾಗ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. ಮರುದಿನ ನಾನಾಗಲಿ ನನ್ನ ಗಂಡನಾಗಲಿ ಪೋಲಿಸ ಠಾಣೆಗೆ ಹೋಗಿಲ್ಲ. ಘಟನೆಯಾಗದೇ ಇರುವ ಕಾರಣ ನಾವು ಪೋಲಿಸ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಘಟನೆಯಾಗುವ 1-2 ಗಂಟೆ ಮೊದಲು ಆರೋಪಿತರು ನನ್ನ ಗಂಡನ ತಲೆಗೆ ಕಲ್ಲಿನಿಂದ ಹೊಡೆದು ಗಾಯ ಮಾಡಿದ್ದಾರೆ ಆದರೂ ಸಹ ನಾವು ಆರೋಪಿತರ ವಿರುದ್ದ ದೂರು ನೀಡಿರುವುದಿಲ್ಲ ಆದರೆ ಆರೋಪಿತರೇ ನಮ್ಮ ವಿರುದ್ದ ಪ್ರಕರಣವನ್ನು ದಾಖಲಿಸಿದ್ದಾರೆ. ಈ ಪ್ರಕರಣದ ಘಟನೆಯಾದ ದಿನದಂದು ಸಾಯಂಕಾಲ 4 ಗಂಟೆಗೆ ಆರೋಪಿತರು ನನ್ನ ಗಂಡನ ತಲೆಗೆ ಹೊಡೆದಿದ್ದರು. ಅದೇ ದಿನ ಸಾಯಂಕಾಲ 4-5 ಗಂಟೆಗೆ ಸುಲೇಪೇಟದಲ್ಲಿ ಖಾಸಗಿ ಆಸ್ಪತೆಗೆ ಹೋಗಿ ನನ್ನ ಗಂಡನಿಗೆ ಚಿಕಿತ್ಸೆ ಕೊಡಿಸಿರುತ್ತೇನೆ. ಸಾಕ್ಷಿ ಮುಂದುವರೆದು ಸರಕಾರಿ ಆಸ್ಪತ್ರೆಗೆ

ಹೋದರೆ ಪ್ರಕರಣ ದಾಖಲಾಗುತ್ತದೆ ಎಂದು ತಿಳಿದು ಖಾಸಗಿ ಆಸ್ಪತ್ರೆಗೆ ಹೋಗಿದ್ದೇವೆ ಎಂದು ನುಡಿಯುತ್ತಾರೆ. ಆಸ್ಪತ್ರೆಗೆ ಹೊದಾಗ ಸಾಯಂಕಾಲ 5-6 ಗಂಟೆಯಾಗಿತ್ತು. ಆಸ್ಪತ್ರೆಯಲ್ಲಿ ನನ್ನ ಗಂಡ ಸೇರಿಕೆಯಾಗಿರಲಿಲ್ಲ. ಮರಳಿ ನಮ್ಮ ಊರಿಗೆ ಹೋದಾಗ ಸಾಯಂಕಾಲ 9-9.30 ಗಂಟೆಯಾಗಿತ್ತು. ದೂರನ್ನು ನಾವು ನ್ಯಾಯಾಲಯದ ಆವರಣದಲ್ಲಿರುವ ಅಂಗಡಿಯಲ್ಲಿ ಟೈಪ ಮಾಡಿಸಿರುತ್ತೇವೆ. ದೂರನ್ನು ನಿಮ್ಮ ವಕೀಲರು ಟೈಪ ಮಾಡಿರುತ್ತಾರಾ ಎಂದು ಪ್ರಶ್ನಸಿದಾಗ ಸಾಕ್ಷಿ ನಾನೇ ಟೈಪ ಮಾಡಿಸಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿತರು ನನ್ನ ಗಂಡನ ವಿರುದ್ದ ಪಾಲುಗಾರಿಕೆಗಾಗಿ ದಾವೆ ಹೂಡಿದ ಕಾರಣ ನನ್ನ ಗಂಡ ನನಗೆ ಮುಂದು ಮಾಡಿ ಈ ದೂರನ್ನು ಹೂಡಿದ್ದಾನೆ ಎಂದರೆ ಸರಿಯಲ್ಲ.

ನನಗೆ ಸೀರೆ ಹಿಡಿದು ಎಳೆದಾಡಿದ ಬಗ್ಗೆ ಮತ್ತು ಹೊಡೆಬಡೆ ಮಾಡಿದ ಬಗ್ಗೆ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ದೂರನು ನೀಡಲು ಹೋದಾಗ ಬಿಟ್ಟು ಬೇರೆ ಯಾವುದೇ ದಿನ ನಾವು ಪೋಲಿಸ ಠಾಣೆಗೆ ಹೋಗಿಲ್ಲ ಎಂದರೆ ಸರಿ. ನ್ಯಾಯಾಲಯಕ್ಕೆ ದೂರು ಸಲ್ಲಿಸ ನಂತರ ಪೋಲಿಸರು ನಮ್ಮ ಊರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಜಗಳವನ್ನು ಚಾಸಾ-4 ಮತ್ತು 6 ರವರು ಬಿಡಿಸಿರುವ ಬಗ್ಗೆ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಸರಕಾರಿ ಆಸ್ಪತ್ರೆಗೆ ಹೋದಾಗ ನಿಮ್ಮ ಜೊತೆ ನಿಮ್ಮ ಗಂಡ ಬಂದಿದ್ದರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನ್ನ ಮಗ ಹಾಗೂ ಒಬ್ಬರು ಪೋಲಿಸರು ಬಂದಿದ್ದರು ಎಂದು ನುಡಿಯುತ್ತಾರೆ.

ಘಟನೆಯಾದ ಮರುದಿನ ಬಿಟ್ಟು ಬೇರೆ ಯಾವುದೇ ದಿನ ಸರಕಾರಿ ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿ. 1 ನೇ ಆರೋಪಿ ಸಲ್ಲಿಸಿದ ದಾವೆ ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಗಂಡ ಹಾಗೂ ಮಕ್ಕಳು ಆರೋಪಿತರಿಗೆ ಸತಾಯಿಸಲು ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**